**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:-** ರಾಜ್ಯದಲ್ಲಿ ನೂತನವಾಗಿ ಸೃಜನೆಯಾಗಿರುವ ಗ್ರಾಮ ಪಂಚಾಯತಿಗಳ ಪೈಕಿ 50 ಗ್ರಾಮ ಪಂಚಾಯತಿಗಳಿಗೆ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. 2021-22ನೇ ಸಾಲಿನ ಆಯವ್ಯಯ ಸಂಪುಟ-4 ಅಭಿಯಾಚನೆ:07
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ. 350 ಗ್ರಾಪಂಅ 2015(ಪಿ-3) ದಿನಾಂಕ:28.12.2016, 16.09.2017, 08.11.2017, 20.01.2020, ಮತ್ತು 10.03.2020
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಮೈಸೂರು, ಮತ್ತು ಶಿವಮೊಗ್ಗ ರವರ ಪ್ರಸ್ತಾವನೆಗಳು.

**ಪ್ರಸ್ತಾವನೆ:**

ಮೇಲೆ ಓದಲಾದ(1)ರಂತೆ 2021-22ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅನುದಾನದ ಲೆಕ್ಕ ಶೀರ್ಷಿಕೆ 4515-00-102-0-01 ರಡಿ ರೂ.1,000.00 ಲಕ್ಷಗಳು ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. 2021-22ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ನೂತನ ಕಟ್ಟಡ ನಿರ್ಮಾಣಕ್ಕಾಗಿ ಸದರಿ ಲೆಕ್ಕ ಶೀರ್ಷಿಕೆಯಡಿಯಿಂದ ಅನುದಾನ ಬಿಡುಗಡೆಯಾಗಿರುತ್ತದೆ.

ಮೇಲೆ ಓದಲಾದ(2)ರಂತೆ, ಗ್ರಾಮ ಪಂಚಾಯತಿಗಳ ನೂತನ ಕಟ್ಟಡ ನಿರ್ಮಾಣಕ್ಕಾಗಿ ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಮೈಸೂರು, ಮತ್ತು ಶಿವಮೊಗ್ಗ ಜಿಲ್ಲೆಗಳ 50 ಗ್ರಾಮ ಪಂಚಾಯತಿಗಳಿಗೆ ತಲಾ ರೂ.10.00 ಲಕ್ಷಗಳಂತೆ ರೂ.500.00 ಲಕ್ಷಗಳ ಮೊದಲನೆ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ(3)ರಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಮೈಸೂರು, ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಸದರಿ 50 ಗ್ರಾಮ ಪಂಚಾಯತಿಗಳ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಪ್ರಸ್ತಾವನೆ ಬಂದಿರುತ್ತದೆ.

ಅದರಂತೆ, ಅನುಬಂಧ-1ರಲ್ಲಿ ತಿಳಿಸಿರುವ 50 ಗ್ರಾಮ ಪಂಚಾಯತಿಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಪ್ರತಿ ಗ್ರಾಮ ಪಂಚಾಯತಿಗಳಿಗೆ ರೂ.10.00 ಲಕ್ಷಗಳಂತೆ ಒಟ್ಟು ರೂ.500.00 ಲಕ್ಷಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗಳ 15ನೇ ಹಣಕಾಸು ಆಯೋಗದ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

**ಅದರಂತೆ ಈ ಆದೇಶ.**

**ಸರ್ಕಾರದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಅಭಿವೃದ್ಧಿ/24/2020, ಬೆಂಗಳೂರು, ದಿನಾಂಕ:09.08.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅನುಬಂಧ-1ರಲ್ಲಿ ಹೆಸರಿಸಿರುವ 50 ಗ್ರಾಮ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ.500.00 ಲಕ್ಷಗಳನ್ನು (ಐದು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ (ಜಿಲ್ಲಾ ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ರಾಜ್ಯ ಹುಜೂರ್ ಖಜಾನೆಯಿಂದ ಪೇಯೀಸ್ ರಸೀತಿಯ ಮೇಲೆ ಡ್ರಾ ಮಾಡಿ, ಈ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆಯ ಮೂಲಕ ಸಂಬಂಧಿಸಿದ ಗ್ರಾಮ ಪಂಚಾಯತಿಗಳ 15ನೇ ಹಣಕಾಸು ಆಯೋಗದ ಉಳಿತಾಯ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ವರ್ಗಾಯಿಸಲು ಆದೇಶಿಸಿದೆ. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 4515-00-102-0-01 ಅಡಿಯಲ್ಲಿ ಭರಿಸಲು ತಿಳಿಸಿದೆ.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೂ ವಿನಿಯೋಗಿಸತಕ್ಕದ್ದಲ್ಲ.

ಕೂಡಲೇ ಗ್ರಾಮ ಪಂಚಾಯಿತಿ ಕಟ್ಟಡಗಳನ್ನು ನಿರ್ಮಿಸಿ, ಪೂರ್ಣಗೊಂಡ ವರದಿ ಮತ್ತು ಹಸ್ತಾಂತರಗೊಂಡ ವರದಿ, ಕಟ್ಟಡಗಳ ಛಾಯಾಚಿತ್ರಗಳನ್ನು ಮತ್ತು ಹಣಬಳಕೆ ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:05.04.2021ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

9/8/21
**(ಚೇತನ ಎಂ.)**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ವೃತ್ತ, ಬೆಂಗಳೂರು,
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
7. ನಿರ್ದೇಶಕರು(ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
8. ನಿರ್ದೇಶಕರು, NMC ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು,
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಮೈಸೂರು, ಮತ್ತು ಶಿವಮೊಗ್ಗ ಜಿಲ್ಲೆಗಳು.
10. ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂಎಸ್‌ಎಸ್‌ಬಿ ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು,
11. ಸಂಬಂಧಿಸಿದ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಹಾವೇರಿ, ಮೈಸೂರು, ಮತ್ತು ಶಿವಮೊಗ್ಗ
12. 50 ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಅಧ್ಯಕ್ಷರುಗಳು (ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿ,
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿ,
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಬೆಂಗಳೂರು.
5. ನಿರ್ದೇಶಕರು(ಪಂ.ರಾಜ್-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
6. ನಿರ್ದೇಶಕರು(ಪಂ.ರಾಜ್-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
7. ಕಛೇರಿ/ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತಕ್ಕೆ.

**ಸರ್ಕಾರದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಅಭಿವೃದ್ಧಿ/24/2020, ಬೆಂಗಳೂರು, ದಿನಾಂಕ:09.08.2021**
**ಗ್ರಾಮ ಪಂಚಾಯಿತಿ ನೂತನ ಕಟ್ಟಡ ನಿರ್ಮಾಣಕ್ಕೆ ಎರಡನೇ ಕಂತಿನ ಅನುದಾನ ಬಿಡುಗಡೆ**

## ಅನುಬಂಧ-1

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ | ಈಗಾಗಲೇ ಬಿಡುಗಡೆ ಯಾಗಿರುವ 1ನೇ ಕಂತಿನ ಅನುದಾನ (ಲಕ್ಷ ರೂ.ಗಳಲ್ಲಿ) | ಈ ಆದೇಶದಲ್ಲಿ ಬಿಡುಗಡೆ ಮಾಡುತ್ತಿರುವ 2ನೇ ಕಂತಿನ ಅನುದಾನ (ಲಕ್ಷ ರೂ.ಗಳಲ್ಲಿ) | ಒಟ್ಟು ಬಿಡುಗಡೆ ಯಾಗಿರುವ ಅನುದಾನ |
|---|---|---|---|---|---|---|
| 1 | ಬೆಳಗಾವಿ | ಬೆಳಗಾವಿ | ಕುಕಡೊಳ್ಳಿ | 10.00 | 10.00 | 20.00 |
| 2 | ಬೆಳಗಾವಿ | ರಾಯಭಾಗ | ಯಡ್ರಾಂವ | 10.00 | 10.00 | 20.00 |
| 3 | ಬೆಳಗಾವಿ | ರಾಯಭಾಗ | ಕೆಂಪಟ್ಟಿ | 10.00 | 10.00 | 20.00 |
| 4 | ಬೆಳಗಾವಿ | ಗೋಕಾಕ | ದಂಡಾಪುರ | 10.00 | 10.00 | 20.00 |
| 5 | ಬೆಳಗಾವಿ | ಗೋಕಾಕ | ಪಟಗುಂದಿ | 10.00 | 10.00 | 20.00 |
| 6 | ಬೆಳಗಾವಿ | ಅಥಣಿ | ಸುಟ್ಟಟ್ಟಿ | 10.00 | 10.00 | 20.00 |
| 7 | ಬೆಳಗಾವಿ | ಅಥಣಿ | ರಡ್ಡೇರಹಟ್ಟಿ | 10.00 | 10.00 | 20.00 |
| 8 | ಬೆಳಗಾವಿ | ಅಥಣಿ | ಬಡಚಿ | 10.00 | 10.00 | 20.00 |
| 9 | ಬೆಳಗಾವಿ | ಸವದತ್ತಿ | ಭಂಡಾರಹಳ್ಳಿ | 10.00 | 10.00 | 20.00 |
| 10 | ಬೆಳಗಾವಿ | ಸವದತ್ತಿ | ಅಲದಕಟ್ಟಿ ಕೆ.ಎಂ. | 10.00 | 10.00 | 20.00 |
| 11 | ತುಮಕೂರು | ಶಿರಾ | ಕುರುಬರಹಳ್ಳಿ | 10.00 | 10.00 | 10.00 |
| 12 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಪೋಲನಾಯಕನಹಳ್ಳಿ | 10.00 | 10.00 | 20.00 |
| 13 | ಚಿಕ್ಕಬಳ್ಳಾಪುರ | ಗೌರಿಬಿದನೂರು | ಶ್ಯಾಂಪುರ | 10.00 | 10.00 | 20.00 |
| 14 | ಚಿಕ್ಕಬಳ್ಳಾಪುರ | ಗುಡಿಬಂಡೆ | ದಪ್ಪರ್ತಿ | 10.00 | 10.00 | 20.00 |
| 15 | ದಾವಣಗೆರೆ | ಹರಿಹರ | ಉಕ್ಕಡಗಾತ್ರಿ | 10.00 | 10.00 | 20.00 |
| 16 | ದಾವಣಗೆರೆ | ದಾವಣಗೆರೆ | ಹಳೆಬಾತಿ | 10.00 | 10.00 | 20.00 |
| 17 | ದಾರವಾಡ | ಹುಬ್ಬಳಿ | ಕಿರೇಸೂರು | 10.00 | 10.00 | 20.00 |
| 18 | ದಾರವಾಡ | ಹುಬ್ಬಳಿ | ಅಗಡಿ | 10.00 | 10.00 | 20.00 |
| 19 | ದಾರವಾಡ | ದಾರವಾಡ | ಮನಸೂರ | 10.00 | 10.00 | 20.00 |
| 20 | ದಾರವಾಡ | ನವಲಗುಂದ | ಬೆಳಹಾರ | 10.00 | 10.00 | 20.00 |
| 21 | ಗದಗ | ಗದಗ | ತಿಮ್ಮಾಪೂರ | 10.00 | 10.00 | 20.00 |
| 22 | ಹಾಸನ | ಚನ್ನರಾಯಪಟ್ಟಣ | ಕಬ್ಬಾಳು | 10.00 | 10.00 | 20.00 |
| 23 | ಹಾವೇರಿ | ಬ್ಯಾಡಗಿ | ಮತ್ತೂರು | 10.00 | 10.00 | 20.00 |
| 24 | ಹಾವೇರಿ | ಹಾನಗಲ್ಲ | ಆಲದಕಟ್ಟೆ | 10.00 | 10.00 | 20.00 |
| 25 | ಹಾವೇರಿ | ಹಾನಗಲ್ಲ | ಡೊಳ್ಳೇಶ್ವರ | 10.00 | 10.00 | 20.00 |
| 26 | ಹಾವೇರಿ | ಹಿರೇಕಿರೂರು | ಚಿಕ್ಕಯಡಚಿ, | 10.00 | 10.00 | 20.00 |
| 27 | ಹಾವೇರಿ | ಹಾವೇರಿ | ನಿಲೋಗಲ್, | 10.00 | 10.00 | 20.00 |
| 28 | ಹಾವೇರಿ | ಹಾವೇರಿ | ಹೊಸಕಿತ್ತೂರ | 10.00 | 10.00 | 20.00 |
| 29 | ಹಾವೇರಿ | ಹಾವೇರಿ | ಬೂದಗಟ್ಟೆ | 10.00 | 10.00 | 20.00 |
| 30 | ಹಾವೇರಿ | ರಾಣೇಬೆನ್ನೂರು | ಹೆಡಿಯಾಲ | 10.00 | 10.00 | 20.00 |
| 31 | ಹಾವೇರಿ | ರಾಣೇಬೆನ್ನೂರು | ಸೋಮಲಾಪುರ | 10.00 | 10.00 | 20.00 |
| 32 | ಹಾವೇರಿ | ರಾಣೇಬೆನ್ನೂರು | ಗುಡ್ಡದ ಅನ್ವೇರಿ, | 10.00 | 10.00 | 20.00 |
| 33 | ಹಾವೇರಿ | ರಾಣೇಬೆನ್ನೂರು | ಮೈಟಿ ಹೊನ್ನತ್ತಿ | 10.00 | 10.00 | 20.00 |
| 34 | ಹಾವೇರಿ | ಸವಣೂರು | ಡೊಂಬರಮತ್ತೂರ | 10.00 | 10.00 | 20.00 |
| 35 | ಹಾವೇರಿ | ಶಿಗ್ಗಾವಿ | ಹುನಗುಂದ, | 10.00 | 10.00 | 20.00 |

| | | | | | | |
|---|---|---|---|---|---|---|
| 36 | ಹಾವೇರಿ | ಶಿಗ್ಗಾವಿ | ಹಳೇಬಂಕಾಪುರ, | 10.00 | 10.00 | 20.00 |
| 37 | ಹಾವೇರಿ | ಶಿಗ್ಗಾವಿ | ಗುಡ್ಡದ ಚಿನ್ನಪೂರ | 10.00 | 10.00 | 20.00 |
| 38 | ಮೈಸೂರು | ಕೆ.ಆರ್.ನಗರ | ಸಿದ್ದಾಪುರ | 10.00 | 10.00 | 20.00 |
| 39 | ಮೈಸೂರು | ಹುಣಸೂರು | ಹುಸೇನ್‌ಪುರ | 10.00 | 10.00 | 20.00 |
| 40 | ಶಿವಮೊಗ್ಗ | ಶಿವಮೊಗ್ಗ | ಸೋಗಾನೆ, | 10.00 | 10.00 | 20.00 |
| 41 | ಶಿವಮೊಗ್ಗ | ಶಿವಮೊಗ್ಗ | ಮುದ್ದಿನಕೊಪ್ಪ, | 10.00 | 10.00 | 20.00 |
| 42 | ಶಿವಮೊಗ್ಗ | ಶಿವಮೊಗ್ಗ | ಬೇಡರಹೊಸಹಳ್ಳಿ, | 10.00 | 10.00 | 20.00 |
| 43 | ಶಿವಮೊಗ್ಗ | ಶಿವಮೊಗ್ಗ | ತುಪ್ಪೂರು | 10.00 | 10.00 | 20.00 |
| 44 | ಶಿವಮೊಗ್ಗ | ಶಿವಮೊಗ್ಗ | ಕೋಹಳ್ಳಿ, | 10.00 | 10.00 | 20.00 |
| 45 | ಶಿವಮೊಗ್ಗ | ಭದ್ರಾವತಿ | ಹನುಮಂತಾಪುರ | 10.00 | 10.00 | 20.00 |
| 46 | ಶಿವಮೊಗ್ಗ | ಭದ್ರಾವತಿ | ಸನ್ಯಾಸಿಕೊಡಮಗ್ಗೆ | 10.00 | 10.00 | 20.00 |
| 47 | ಶಿವಮೊಗ್ಗ | ಹೊಸನಗರ | ರಾಮಚಂದ್ರಪುರ | 10.00 | 10.00 | 20.00 |
| 48 | ಶಿವಮೊಗ್ಗ | ಶಿಕಾರಿಪುರ | ಹೋತನಕಟ್ಟೆ | 10.00 | 10.00 | 20.00 |
| 49 | ಶಿವಮೊಗ್ಗ | ಸೂರಬ | ಅಂಡಿಗೆ | 10.00 | 10.00 | 20.00 |
| 50 | ಶಿವಮೊಗ್ಗ | ಸೂರಬ | ದೂಗೂರು | 10.00 | 10.00 | 20.00 |
| | | **ಒಟ್ಟು** | | **50.00** | **50.00** | **100.00** |

(ಚೇತನ ಎಂ.) 9/8/21

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.